ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಕಡತ ಸಂಖ್ಯೆ: ಸಿ7(8)/ಆರ್.ಟಿ.ಇ/ಶು.ಮ/ತಂತ್ರಾಂಶ/2019-20 ದಿನಾಂಕ: 20-09-2019

# ::ಸುತ್ತೋಲೆ::

ವಿಷಯ : 2017-18, 2018-19 ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಮತ್ತು 2018-19ನೇ ಸಾಲಿನ ಅಪೀಲ್ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸಲು ಮಾಡ್ಯೂಲ್‌ಗಳನ್ನು ಮರು ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ : ಮಾನ್ಯ ಆಯುಕ್ತರ ಆದೇಶ ದಿನಾಂಕ : 20-09-2019

&&&&&&

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2017-18ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 12(1)(ಸಿ) ಅಡಿ ದಾಖಲಾದ ಮಕ್ಕಳ ಶುಲ್ಕ ಮರುಪಾವತಿಗಾಗಿ ಕೆಲವು ಶಾಲೆಗಳು ತಂತ್ರಾಂಶದ ಮೂಲಕ ನಿಗಧಿತ ಸಮಯದಲ್ಲಿ ಬೇಡಿಕೆ ಸಲ್ಲಿಸದೇ ಇದ್ದುದರಿಂದ ಅಂತಹ ಶಾಲೆಗಳು 2018-19ನೇ ಸಾಲಿನ ಶುಲ್ಕ ಮರುಪಾವತಿಗೆ ಬೇಡಿಕೆ ಸಲ್ಲಿಸುವ ಪ್ರಕ್ರಿಯೆಯಿಂದ ಹೊರಗುಳಿದಿರುತ್ತವೆ. ಇಂತಹ ಶಾಲೆಗಳಿಗೆ ಅಂತಿಮ ಅವಕಾಶವನ್ನು ನೀಡುವ ಸಲುವಾಗಿ 2017-18ರ ಶುಲ್ಕ ಮರುಪಾವತಿ ತಂತ್ರಾಂಶದ ಮಾಡ್ಯೂಲನ್ನು ಮರು ಬಿಡುಗಡೆಗೊಳಿಸಿ ಬೇಡಿಕೆ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ.

ಇದರೊಂದಿಗೆ 2018-19ನೇ ಸಾಲಿಗೆ ಶುಲ್ಕ ಮರುಪಾವತಿಗಾಗಿ ಶಾಲೆಗಳಿಗೆ ದಿನಾಂಕ : 25-01-2019ರ ಒಳಗೆ ಬೇಡಿಕೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಆದರೆ ಕೆಲವು ಶಾಲೆಗಳು ನಿಗಧಿಪಡಿಸಿದ ಕಾಲಾವಕಾಶದೊಳಗೆ ಬೇಡಿಕೆ ಸಲ್ಲಿಸದೇ ಇದ್ದುದರಿಂದ ಅಂತಹ ಶಾಲೆಗಳಿಗೆ ಬೇಡಿಕೆ ಸಲ್ಲಿಸಲು ಮರು ಅವಕಾಶವನ್ನು ಕಲ್ಪಿಸಲಾಗಿದೆ.

2018-19ನೇ ಸಾಲಿನಲ್ಲಿ ಶುಲ್ಕ ಮರುಪಾವತಿ ಎರಡೂ ಕಂತುಗಳ ಮೊತ್ತವನ್ನು ಪಡೆದು, ಸದರಿ ಮೊತ್ತದಲ್ಲಿ ಶಾಲಾ ಹಂತದಲ್ಲಿ ಕ್ಲೈಮ್ ಮಾಡಿರುವ ಮೊತ್ತದಲ್ಲಿ ಕೆಲವು ಕಾರಣಗಳಿಂದ ಅಂದರೆ ವಿದ್ಯಾರ್ಥಿಗಳ ಸಂಖ್ಯೆ, ಶಾಲಾ ಖರ್ಚು ವೆಚ್ಚಗಳು ಅಥವಾ ಇವೆರಡೂ ಸೇರಿ ವ್ಯತ್ಯಯವಾಗಿರುವ ಶಾಲೆಗಳಿಗೆ ಅನ್ವಯಿಸಿ 2018-19ನೇ ಸಾಲಿಗೆ ಮಾತ್ರ ಅಪಿಲ್ ತಂತ್ರಾಂಶವನ್ನು ಬಿಡುಗಡೆ ಮಾಡಲಾಗಿದೆ.

ಕಳೆದ ಸಾಲಿನಲ್ಲಿ ಬೇಡಿಕೆ ಸಲ್ಲಿಸಲು ಅವಕಾಶ ಪಡೆದ ಶಾಲೆಗಳು SATS ತಂತ್ರಾಂಶದಲ್ಲಿ ಹಾಲಿ ವ್ಯಾಸಂಗ ಮಾಡುತ್ತಿರುವ ಆರ್.ಟಿ.ಇ. ಮಕ್ಕಳನ್ನು ಆರ್.ಟಿ.ಇ.ಯೇತರ ಮಕ್ಕಳೆಂದು ಪರಿಗಣಿಸಿ ಅಥವಾ ಆರ್.ಟಿ.ಇ.ಯೇತರ ಮಕ್ಕಳನ್ನು ಆರ್.ಟಿ.ಇ. ಮಕ್ಕಳು ಎಂದು ಪರಿಗಣಿಸಿ SATS ತಂತ್ರಾಂಶದ ಮುಖೇನ ಆರ್.ಟಿ.ಇ. ಮರುಪಾವತಿ ತಂತ್ರಾಂಶಕ್ಕೆ Push ಮಾಡಿರುವುದು ಕಂಡು

ಬಂದಿರುತ್ತದೆ. ಇದರ ಜೊತೆಗೆ ಶಾಲಾ ಖರ್ಚು ವೆಚ್ಚಗಳ ವಿವರಗಳನ್ನು ಸಹ ಸಲ್ಲಿಸಿ ಆಡಿಟ್ ವರದಿಯ ಪ್ರಕಾರ ಸರಿಪಡಿಸದೇ ಇರುವ ಶಾಲೆಗಳು ಸಹ ಅಪೀಲ್ ತಂತ್ರಾಂಶವನ್ನು ಬಳಸಬಹುದಾಗಿದೆ. SATS ತಂತ್ರಾಂಶದಲ್ಲಿ ಬಿಟ್ಟು ಹೋಗಿರುವ ಆರ್.ಟಿ.ಇ. ಮಕ್ಕಳನ್ನು ಸೇರ್ಪಡಿಸಿ ಅವರು ಹಾಜರಾದ ದಿನಗಳನ್ನು ನಮೂದಿಸಿ ಅಪೀಲ್ ತಂತ್ರಾಂಶದಲ್ಲಿ ಸದರಿ ಮಕ್ಕಳನ್ನು ಸೇರಿಸಿ ಸೇರ್ಪಡೆಯಾದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ವ್ಯತ್ಯಾಸದ ಮೊತ್ತವನ್ನು ಅಪೀಲ್ ತಂತ್ರಾಂಶದಲ್ಲಿ ಪಡೆಯಬಹುದಾಗಿದೆ. ಶಾಲಾ ಖರ್ಚುವೆಚ್ಚಗಳ ಆಧಾರದ ಮೇಲೆ ಅಪೀಲ್ ಹೋಗಬಯಸುವ ಶಾಲೆಗಳು ಇದಕ್ಕೆ ಸಂಬಂಧಿಸಿದ 2017-18ರ ಪರಿಷ್ಕೃತ ಆಡಿಟ್ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ. **2018-19ರ ಅಪೀಲ್ ತಂತ್ರಾಂಶದಲ್ಲಿ ಪ್ರಸ್ತಾವನೆ ಸಲ್ಲಿಸಲು ಬಯಸುವ ಶಾಲೆಗಳು ಅಪೀಲ್ ಪ್ರಕ್ರಿಯೆಯಲ್ಲಿ ವಿವಿಧ ಹಂತಗಳಲ್ಲಿ ಅನುಮೋದನೆ ಅಥವಾ ತಿರಸ್ಕೃತ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ 2019-20ರ ಶುಲ್ಕ ಮರುಪಾವತಿಗಾಗಿ ಬೇಡಿಕೆ ಸಲ್ಲಿಸಲು ಸಾಧ್ಯವಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಿದೆ.**

**ಮೇಲ್ಕಂಡ ಮೂರು ತಂತ್ರಾಂಶಗಳ ಬಿಡುಗಡೆ, ಬೇಡಿಕೆ ಸಲ್ಲಿಕೆಯ ಪ್ರಾರಂಭಿಕ ಮತ್ತು ಅಂತಿಮ ದಿನಾಂಕಗಳ ವೇಳಾಪಟ್ಟಿ ಈ ಕೆಳಕಂಡಂತಿದೆ.**

| ಕ್ರ.ಸಂ. | ಶುಲ್ಕ ಮರುಪಾವತಿ ತಂತ್ರಾಂಶದ ಮಾಡ್ಯೂಲ್ | ತಂತ್ರಾಂಶದ ಬಿಡುಗಡೆ ದಿನಾಂಕ ಮತ್ತು ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸಲು ಪ್ರಾರಂಭಿಕ ದಿನಾಂಕ | ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸಲು ಅಂತಿಮ ದಿನಾಂಕ |
|---|---|---|---|
| 1 | 2017-18 ರೆಗ್ಯೂಲರ್ ತಂತ್ರಾಂಶ | 20-09-2019 | 31-10-2019 |
| 2 | 2018-19 ರೆಗ್ಯೂಲರ್ ತಂತ್ರಾಂಶ | 20-09-2019 | 31-10-2019 |
| 3 | 2018-19 ಅಪೀಲ್ ತಂತ್ರಾಂಶ | 20-09-2019 | 31-10-2019 |

ವೇಳಾಪಟ್ಟಿಯ ಅನುಸಾರ ಎಲ್ಲಾ ತಂತ್ರಾಂಶಗಳ ಮೂಲಕ ಬೇಡಿಕೆ ಸಲ್ಲಿಸಲು ಅಂತಿಮ ದಿನಾಂಕ : 31-10-2019 ಆಗಿರುತ್ತದೆ. ಈ ದಿನಾಂಕದ ನಂತರ ಯಾವುದೇ ಶಾಲೆಗಳಿಗೂ ಬೇಡಿಕೆ ಸಲ್ಲಿಸಲು ಅವಕಾಶ ನೀಡುವುದಿಲ್ಲವೆಂದು ಸ್ಪಷ್ಟಪಡಿಸಿದೆ. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ), ರವರು ತಮ್ಮ ಹಂತದಲ್ಲಿ ಸಂಬಂಧಿಸಿದ ಆರ್.ಟಿ.ಇ. ಶಾಲೆಗಳಿಗೆ ಸುತ್ತೋಲೆಯನ್ನು ಹೊರಡಿಸಿ ಪೂರ್ಣ ಮಾಹಿತಿಯನ್ನು ನೀಡಲು ಸೂಚಿಸಿದೆ. ವೇಳಾಪಟ್ಟಿಯಂತೆ ಬೇಡಿಕೆ ಸಲ್ಲಿಸಿ ಎಲ್ಲಾ ಹಂತಗಳಲ್ಲಿ ಪುರಸ್ಕೃತವಾದ ಶಾಲೆಗಳಿಗೆ ಕೂಡಲೇ Santction order generate ಮಾಡಿ ದಿನಾಂಕ : 15-11-2019ರ ಒಳಗೆ ಖಜಾನೆ-2ರ ಮೂಲಕ ಶಾಲೆಗಳ ಬ್ಯಾಂಕ್ ಖಾತೆಗೆ ಸಂದಾಯ ಮಾಡಲು ಕ್ರಮವಹಿಸುವುದು. ಇದನ್ನು ಪ್ರಥಮ ಆದ್ಯತೆಯೆಂದು ಪರಿಗಣಿಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆರ್.ಟಿ.ಇ. ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರ ಸಭೆಯನ್ನು ಕರೆದು ಮೇಲ್ಕಂಡ ತಂತ್ರಾಂಶಗಳ ಮಾಡ್ಯೂಲ್‌ಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿರುವ ಮ್ಯಾನ್ಯುಯಲ್ ಬಳಸಿ ಪ್ರಾತ್ಯಕ್ಷತೆಯ ಮೂಲಕ ಮಾರ್ಗದರ್ಶನ ನೀಡಲು ಸೂಚಿಸಿದೆ.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)
20/09/19 ೨/2019

ರವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ ಇ–ಮೇಲ್ ಮುಖಾಂತರ
2. ರಾಜ್ಯದ ಎಲ್ಲಾ ವಲಯ/ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಇ–ಮೇಲ್ ಮುಖಾಂತರ

ಪ್ರತಿಯನ್ನು,

1. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗಾಗಿ
3. ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು, ಇ–ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ಹಿರಿಯ ಕಾರ್ಯಕ್ರಮಾಧಿಕಾರಿಗಳು/ಪ್ರೋಗ್ರಾಮರ್ಸ್, ಎಸ್.ಎ.ಟಿ.ಎಸ್ ವಿಭಾಗ, ಸರ್ವಶಿಕ್ಷಣ ಅಭಿಯಾನ, ಇವರಿಗೆ ಕಳುಹಿಸುತ್ತಾ SATS ತಂತ್ರಾಂಶದಲ್ಲಿ ಶಾಲೆಗಳು ಸೇರಿಸಿರುವ ಹೆಚ್ಚುವರಿ ವಿದ್ಯಾರ್ಥಿಗಳು ಮತ್ತು ಆ ವಿದ್ಯಾರ್ಥಿಗಳ ಹಾಜರಾತಿ ದಾಖಲೆಯನ್ನು ಇ–ಆಡಳಿತ ವಿಭಾಗಕ್ಕೆ ಒದಗಿಸಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.